
# ಭ್ರೂಣಹತ್ಯೆ

**ಲಕ್ಷ್ಮಣ ಬಾದಾಮಿ**

ಕಲೆ: ಭಾವು ಪತ್ತಾರ್



ನಾನು ಹೇಳ ಹೊರಟಿರುವ ಭ್ರೂಣ ಹತ್ಯೆಯ ಬಗ್ಗೆ ಮೊದಲೇ ಹೇಳಿಬಿಡುತ್ತೇನೆ. ನೀವೆಲ್ಲ ತಿಳಿದಂತೆ ಗರ್ಭದೊಳಗಿರುವ ಭ್ರೂಣದ ಲಿಂಗ ತಮಗೆ ಬೇಕಾದ ರೀತಿಯಲ್ಲಿ ಇಲ್ಲವೆಂದು ಅದನ್ನು ಪ್ರಸವ ಪೂರ್ವದಲ್ಲಿಯೇ ಭೂಮಿಗೆ ಬರದಂತೆ ನೋಡಿಕೊಳ್ಳುವುದಾಗಿದೆ. ಬಹಳಷ್ಟು ಜನರು ಗಂಡು ಸಂತಾನವವನ್ನು ಬಯಸಿ ಒಡಲೊಳಗಿರುವ ಜೀವಿ ಹೆಣ್ಣಾಗಿದ್ದರೆ ಕೂಡಲೇ ಅದರ ಕಥೆ ಮುಗಿಸಿಬಿಡುತ್ತಾರೆ. ಆದರೆ, ಹೆಣ್ಣು ಬೇಕೆಂದು ಹಂಬಲಿಸಿ ಗಂಡು ಭ್ರೂಣವನ್ನು ಇಲ್ಲವಾಗಿಸಿದ ಮಾತನ್ನು ನಾನಂತೂ ಇಲ್ಲೀತನಕ ಯಾವತ್ತೂ ಕೇಳಿಲ್ಲ. ಈಗ ಕಾನೂನು ಬಹಳಷ್ಟು ಬಿಗಿಯಾಗಿರುವುದರಿಂದ ಈ ಭ್ರೂಣಹತ್ಯೆ ನಿಂತಿದೆ ಎಂದು ಹೇಳಬಹುದು. ಆದರೆ, ನನ್ನ ಭ್ರೂಣಕ್ಕೆ ಗಂಡು ಹೆಣ್ಣು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಒಟ್ಟು ಭ್ರೂಣ ಅಷ್ಟೇ. ಅದೊಂದು ಜೀವವಾಗಿ ಉಳಿಯಬೇಕಿತ್ತು, ಬೆಳೆಯಬೇಕಿತ್ತು. ಹಾಗಾಗಲಿಲ್ಲವಲ್ಲ!... ಎಂಬ ಕೊರಗು ನಿರಂತರ ನನ್ನನ್ನು ಕಾಡುತ್ತಲೇ ಇರುತ್ತದೆ. ನನ್ನ ಭ್ರೂಣವೆಂದರೆ ಒಂದು ಕತೆಯೋ, ಕವಿತೆಯೋ ಆಗಬೇಕಿದ್ದ ಒಂದು ಆಲೋಚನೆ, ಹೊಳಹು (Flash) ಆಗಿದೆ. ಇದೇನಿದು ಕವಿತೆ, ಕಥೆ ಬಗ್ಗೆ ಹೊಳೆದ ಒಂದು ಎಳೆಯ ತುಣುಕನ್ನು 'ಭ್ರೂಣ' ಎಂಬ ಪದಪುಂಜದಿಂದ ಕರೆಯಬಹುದಾ... ಅಂತ ನೀವು